104

# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಾದ ಸಿ.ಟಿ. ರವಿ, ಶ್ರೀ ಎನ್ ರವಿಕುಮಾರ್ ಹಾಗೂ ಇತರರು ನಿಯಮ 72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ:104 ಕ್ಕೆ ಉತ್ತರ**

**ಸೂಚನೆ:**

ಅಬಕಾರಿ ಲೋಕೋಪಯೋಗಿ ಸೇರಿದಂತೆ ಸರ್ಕಾರದ ಕೆಲವು ಇಲಾಖೆಗಳಲ್ಲಿ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಸ್ಥಳ ನಿಯುಕ್ತಿಗೊಳಿಸದೆ ಹುದ್ದೆ ನಿರೀಕ್ಷೆಯಲ್ಲಿಡಲಾಗಿದೆ. ಇದರಿಂದಾಗಿ ಸದರಿ ಅಧಿಕಾರಿ ಮತ್ತು ಸಿಬ್ಬಂದಿಗಳ ಕುಟುಂಬಗಳ ಜೀವನ ನಿರ್ವಹಣೆ ತುಂಬಾ ತೊಂದರೆಯಾಗಿದೆ. ಎಲ್ಲಾ ಇಲಾಖೆಗಳಲ್ಲಿ ಸ್ಥಳ ನಿರೀಕ್ಷೆಯಲ್ಲಿರುವ ಅಧಿಕಾರಿ ಮತ್ತು ನೌಕರರಿಗೆ ಸರ್ಕಾರ ತಕ್ಷಣ ಸ್ಥಳನಿಯುಕ್ತಿಗೊಳಿಸುವುದು ಅತ್ಯಾವಶ್ಯಕವಾಗಿದ್ದು ಈ ಕುರಿತು ಮಾಹಿತಿ ಒದಗಿಸುವುದು.

**ಉತ್ತರ:**

ಅಬಕಾರಿ ಇಲಾಖೆಯಲ್ಲಿ ದಿನಾಂಕ 12.12.2024ರ ಅಂತ್ಯಕ್ಕೆ 02 ಅಬಕಾರಿ ಉಪ ಆಯುಕ್ತರು, 07 ಅಬಕಾರಿ ಅಧೀಕ್ಷಕರು ಮತ್ತು 14 ಅಬಕಾರಿ ನಿರೀಕ್ಷಕರುಗಳು ಸ್ಥಳ ನಿರೀಕ್ಷಣೆಯಲ್ಲಿದ್ದು, ಇವುಗಳ ಪೈಕಿ ಗ್ರೂಪ್ ಎ ವೃಂದದ ಅಧಿಕಾರಿಗಳಾದ ಅಬಕಾರಿ ಉಪ ಆಯುಕ್ತರು ಮತ್ತು ಅಬಕಾರಿ ಅಧೀಕ್ಷಕರುಗಳು ಸ್ಥಳ ನಿಯುಕ್ತಿಗಾಗಿ ಸರ್ಕಾರದಲ್ಲಿ ವರದಿ ಮಾಡಿಕೊಂಡಿದ್ದು, ಗ್ರೂಪ್-ಬಿ ವೃಂದದ ಅಧಿಕಾರಿಗಳಾದ ಅಬಕಾರಿ ಉಪ ಅಧೀಕ್ಷಕರು ಮತ್ತು ಗ್ರೂಪ್-ಸಿ ವೃಂದದ ನೌಕರರಾದ ಅಬಕಾರಿ ನಿರೀಕ್ಷಕರು ಇವರುಗಳು ಸ್ಥಳ ನಿಯುಕ್ತಿಗಾಗಿ ಅಬಕಾರಿ ಇಲಾಖೆಯ ಕೇಂದ್ರ ಕಚೇರಿಯಲ್ಲಿ ವರದಿ ಮಾಡಿಕೊಂಡಿದ್ದು, ಪ್ರಸ್ತುತ ಈ ಅಧಿಕಾರಿಗಳಿಗೆ ಸ್ಥಳ ನಿಯುಕ್ತಿಗೊಳಿಸಲಾಗಿರುತ್ತದೆ.

ಲೋಕೋಪಯೋಗಿ ಇಲಾಖೆಯಿಂದ ವಿವಿಧ ಇಲಾಖೆಗಳಲ್ಲಿ ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿದ್ದ ಅಧಿಕಾರಿ / ಸಿಬ್ಬಂದಿಗಳ ಸೇವೆಯನ್ನು ಮಾತೃ ಇಲಾಖೆಯಾದ ಲೋಕೋಪಯೋಗಿ ಇಲಾಖೆಗೆ ಹಿಂದಿರುಗಿಸುವುದರಿಂದ ಹಾಗೂ ವರ್ಗಾವಣೆಗಳ ಸಂಬಂಧ ಮತ್ತು ಮಾನ್ಯ ನ್ಯಾಯಾಲಯಗಳ ಆದೇಶಗಳನುಸಾರ ಸ್ಥಳನಿಯುಕ್ತಿ ಕೋರಿ ಇಲಾಖೆಯಲ್ಲಿ ವರದಿ ಮಾಡಿಕೊಳ್ಳುವ ಅಧಿಕಾರಿ / ಸಿಬ್ಬಂದಿಗಳಿಗೆ ವಿಳಂಬಕ್ಕೆ ಆಸ್ಪದವಿಲ್ಲದೇ ಸ್ಥಳನಿಯುಕ್ತಿಗೊಳಿಸಿ ಕ್ರಮವಹಿಸಲಾಗಿರುತ್ತದೆ.

ಒಳಾಡಳಿತ ಇಲಾಖಾ ಸಚಿವಾಲಯದ ವ್ಯಾಪ್ತಿಗೆ ಬರುವ ಪೊಲೀಸ್ ಇಲಾಖೆಯಲ್ಲಿ ಎಎಸ್‌ಐ/ಹೆಚ್‌ಸಿ/ಪಿಸಿ ಹುದ್ದೆಗಳಲ್ಲಿ ಯಾವುದೇ ಪೊಲೀಸ್ ಸಿಬ್ಬಂದಿಗಳು ಸ್ಥಳ ನಿರೀಕ್ಷಣೆಯಲ್ಲಿರುವುದಿಲ್ಲ. ಮುಂದುವರೆದು, 05 ಡಿವೈಎಸ್‌ಪಿ (ಸಿವಿಲ್) ಮತ್ತು 45 ಪೊಲೀಸ್ ಇನ್‌ಸ್ಪೆಕ್ಟರ್ (ಸಿವಿಲ್), ಹಾಗೂ ವಿವಿಧ ವಲಯಗಳಲ್ಲಿ 12 ಪಿಎಸ್‌ಐಗಳು (ಸಿವಿಲ್) ಹಾಗೂ ಕಾರಾಗೃಹ ಮತ್ತು ಸುಧಾರಣಾ ಸೇವೆಗಳು ಇಲಾಖೆಯಲ್ಲಿ ಒಬ್ಬರು ಮುಖ್ಯ ಅಧೀಕ್ಷಕರು ಸ್ಥಳ ನಿರೀಕ್ಷಣೆಯಲ್ಲಿದ್ದು, ಹಾಗೂ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಸಂಕೇದಕಟ್ಟೆ ಅಗ್ನಿಶಾಮಕ ಠಾಣೆಯಲ್ಲಿ ಜಿಲ್ಲಾ ಅಗ್ನಿಶಾಮಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅಧಿಕಾರಿಯವರಿಗೆ ಕೇಂದ್ರ ಕಛೇರಿಗೆ ವರದಿ ಮಾಡಿಕೊಳ್ಳಲು ಸೂಚಿಸಿದ್ದು, ಸ್ಥಳ ನಿರೀಕ್ಷಣೆಯಲ್ಲಿದ್ದು, ಪ್ರಸ್ತುತ ಈ ಅಧಿಕಾರಿಗಳನ್ನೆಲ್ಲಾ ಈಗಾಗಲೇ ಸ್ಥಳ ನಿಯುಕ್ತಿಗೊಳಿಸಲಾಗಿರುತ್ತದೆ.

ಮುಂದುವರೆದು, ಒಂದು ಇಲಾಖೆಯಲ್ಲಿ ಎರಡು ಸಂದರ್ಭಗಳಲ್ಲಿ ಸ್ಥಳ ನಿಯುಕ್ತಿಗಾಗಿ ಅಧಿಕಾರಿ / ನೌಕರರು ಕಾಯುವ ಪ್ರಮೇಯ ಉದ್ಭವಿಸುತ್ತದೆ

i. ವರ್ಗಾವಣೆಗೊಂಡ / ನಿಯೋಜನೆಗೊಂಡ ಇತರೆ ಇಲಾಖೆಯ ಉದ್ಯೋಗಿಯು ಮತ್ತೊಂದು ಇಲಾಖೆಯಲ್ಲಿ ವರ್ಗಾಯಿಸಲಾದ / ನಿಯೋಜಿಸಲಾದ ಹುದ್ದೆಯಲ್ಲಿ ಕಾರ್ಯವರದಿ ಮಾಡಿಕೊಂಡು ಮರುಸ್ಥಳನಿಯುಕ್ತಿ ಆದೇಶಕ್ಕಾಗಿ ಕಾಯುತ್ತಿರುವಾಗ

ii. ಅದೇ ಇಲಾಖೆಯಲ್ಲಿ ಕೆಲವು ಆಡಳಿತಾತ್ಮಕ ಅಗತ್ಯತೆಯಿಂದಾಗಿ ಅಧಿಕಾರಿ / ನೌಕರರು ಸ್ಥಳ ನಿಯುಕ್ತಿಗಾಗಿ ಕಾಯುತ್ತಿರುವಾಗ

ಮರು ಸ್ಥಳ ನಿಯುಕ್ತಿಗಾಗಿ ಕಾಯುವ ಸಂದರ್ಭವು ತಾತ್ಕಾಲಿಕ ಹಂತದ್ದಾಗಿದ್ದು, ಅಧಿಕಾರಿ / ನೌಕರರುಗಳನ್ನು ಅಲ್ಪಾವಧಿಯಲ್ಲಿಯೇ ಮರುಸ್ಥಳನಿಯುಕ್ತಿ ಗೊಳಿಸಲಾಗುತ್ತದೆ. ಆದ್ದರಿಂದ ಅಧಿಕಾರಿ / ನೌಕರರ ಕುಟುಂಬಗಳ ಜೀವನ ನಿರ್ವಹಣೆಗೆ ತೊಂದರೆಯಾಗುವುದಿಲ್ಲ.

**ಕಡತ ಸಂಖ್ಯೆ: ಸಿಆಸುಇ 247 ರಾಸ 2024**

**(ಸಿದ್ದರಾಮಯ್ಯ)**
ಮುಖ್ಯಮಂತ್ರಿ